
ಎಲ್ಲಾ ಅತ್ತರನ್ನೂ ಕೊಳ್ಳುತ್ತೇನೆ, ಒಟ್ಟು ರೇಟನ್ನು ಬಗೆಹರಿಸಿದರೆ ಕೊಂಡು ಹೋಗುತ್ತೇನೆ ಅಷ್ಟೆ...'' ಕಡ್ಡಿ ತುಂಡು ಮಾಡಿದಂತೆ ಮಾತನಾಡಿದರೂ ಅವಳ ನಗೆಯಲ್ಲಿ ತುಂಟತನವಿತ್ತು. ''ಮೇಮ್‌ಸಾಬ್ ನಾನು ಚಿಲ್ಲರೆ ಚಿಲ್ಲರೆಯಾಗಿ ಮಾರುವುದರಿಂದ ಇದರ ಒಟ್ಟು ಬೆಲೆ ನಿಖರವಾಗಿ ಗೊತ್ತಿಲ್ಲ... ಅಂದಾಜು ನಾಲ್ಕು ಸಾವಿರವಾಗಬಹುದು, ನೀವು ಎಷ್ಟು ಕೊಡುತ್ತೀರಿ ಹೇಳಿ ಮೇಮ್‌ಸಾಬ್...'' ಅವನ ಮಾತು ಮುಗಿಸುವುದರೊಳಗೆ ಅವಳು ಕೈಯಲ್ಲಿದ್ದ ಪರ್ಸ್ ಓಪನ್ ಮಾಡಿ ಎರಡು ಸಾವಿರ ರೂಪಾಯಿಯ ಎರಡು ನೋಟುಗಳನ್ನು, ಐನೂರು ರೂಪಾಯಿಯ ಎರಡು ನೋಟುಗಳನ್ನು ಅವನ ಕೈಗಿಟ್ಟು, ''ಮಾತು ಮಾತಿಗೂ ಮೇಮ್‌ಸಾಬ್ ಅನ್ನಬೇಡ; ನಿನಗಿಂತಲೂ ದೊಡ್ಡವಳೇನಲ್ಲ ನಾನು. ದೊಡ್ಡ ದೊಡ್ಡ ಸೀಸೆಯಲ್ಲಿರುವ ಅತ್ತರನ್ನು ಚಿಕ್ಕ ಚಿಕ್ಕ ಸೀಸೆಗಳಲ್ಲಿ ತುಂಬಿಟ್ಟರೆ, ಆರು ಗಂಟೆಗೆ ಬಂದು ಒಯ್ಯುತ್ತೇನೆ...'' ಎಂದವಳು ಕಾರಿನ ಕಡೆ ನಡೆಯತೊಡಗಿದಳು. ಮೂರು ಹೆಜ್ಜೆ ಇಟ್ಟವಳು ನಿಂತು ಹಿಂತಿರುಗಿ ನೋಡಿ, ''ನೀನು ಬೆಳಗ್ಗೆ ಸೀಸದ ಗುಂಡು ಎತ್ತಿದ್ದನ್ನು ನೋಡಿದೆ. ನಿನ್ನಲ್ಲಿ ದಿಲ್ ಮಸ್ತಾಗಿದೆ...'' ಎಂದು ಕಣ್ಣು ಮಿಟುಕಿಸಿ ಕಾರು ಹತ್ತಿದ್ದಳು. ಸಲೀಂ ಬೆಕ್ಕಸ ಬೆರಗಾಗಿ ನೋಡುತ್ತಿದ್ದ.

''ಅರೆ ಸಲೀಂ ಅವಳು ನಿನ್ನ ಹತ್ರ ವ್ಯಾಪಾರ ಮಾಡಿದ್ದನ್ನು ನಂಬ್ಲಿಕ್ಕೆ ಸಾಧ್ಯವಿಲ್ಲ ನೋಡು, ಕಾಸು ಇಸಿದುಕೊಳ್ಳುವಾಗ ಬೆರಳು ಗಿರುಳು ಸೋಕಿದವೇನು? ಹಾಗಿದ್ದರೆ ನೀನು ನಿಜಕ್ಕೂ ಭಾಗ್ಯವಂತ. ಅವಳನ್ನು ಯಾರೆಂದು ತಿಳಿದಿದ್ದೀಯ...'' ನಾನಾ ತರಹದ ಟೋಪಿಗಳನ್ನು ಗುಡ್ಡೆ ಹಾಕಿಕೊಂಡು ಮಾರುತ್ತಿದ್ದ ಆಸೀಫ್ ಉದ್ಗಾರ ತೆಗೆದಿದ್ದ ಅವಳ ವೈಯಾರದ ನಡಿಗೆಯನ್ನು ತನ್ನ ತನುಮನಗಳಲ್ಲಿ ಇನ್ನಿಲ್ಲದೆ ತುಂಬಿಕೊಳ್ಳುತ್ತಾ.



''ಏ, ಆಸೀಫ್ ಅವಳ್ಯಾರೆಂದು ನಂಗೂ ಗೊತ್ತಿದೆ. ಸಿನಿಮಾ ಪ್ರೊಡ್ಯೂಸರ್ ಮೊಹಮ್ಮದ್ ಖಾನ್ ಮಗಳು. ಅವರಪ್ಪ ಎಂತೆಂಥ ಬಿಗ್ ಬಜೆಟ್ ಸಿನಿಮಾಗಳನ್ನ ತೆಗೆದಿದ್ದಾನೆ ಗೊತ್ತ. ಜೂನಿಯರ್ ಎನ್ಟಿಆರ್, ಮಹೇಶ್ ಬಾಬು, ಅಲ್ಲು ಅರ್ಜುನ್, ಪವನ್ ಕಲ್ಯಾಣ್, ವಿಕ್ಟರಿ ವೆಂಕಟೇಶ್ ಮುಂತಾದವರನ್ನು ಹಾಕಿಕೊಂಡು ಸಿನಿಮಾ ಮಾಡಿದ್ದಾನೆ. ಇವಳನ್ನು ಹಿರೋಯಿನ್ ಆಗಿ ಹಾಕಿಕೊಂಡು ಮುಂದಿನ ಸಿನಿಮಾ ತೆಗಿತಾನಂತೆ. ಹದಿನೈದು ದಿನಗಳ ಹಿಂದೆ ಪತ್ರಿಕೆಯಲ್ಲಿ ಬಂದಿದ್ದನ್ನು ಓದಿದ್ದೀನಿ...'' ಗೋಲಿ ಸೋಡಾ ಗಾಡಿಯ ಮುಸ್ತಫಾ ಮಾತು ಸೇರಿಸಿದ್ದ.

''ಅರೆ, ಅವಳಪ್ಪ ಒಂದು ಕಾಲದಲ್ಲಿ ನಮ್ಮಂಗೇ ಇದ್ದ. ನಲವತ್ತು ವರ್ಷಗಳ ಹಿಂದೆ ಚಾರ್ಮಿನಾರ್ ಹತ್ರ ಒಂದು ಸಣ್ಣ ಪರ್ಲ್ ಅಂಗಡಿ ಸ್ಟಾರ್ಟ್ ಮಾಡಿದವನು. ನಂತರ ಮುಂಬೈ ಕನೆಕ್ಷನ್